

ಪ್ರಾಣಾಪಾಯವಿರಲಿ ನುಗ್ಗಿ ದೃಶ್ಯಗಳನ್ನು ವೀಡಿಯೊ ಮಾಡಿತಂದು ಸ್ಟೋರಿ ಮಾಡಿದ. ‘ಇವನ ಮನೆಯವರದ್ದಾದರೆ ಹಿಂಗೇ ತೋರಿಸ್ತಾನೇನ್ರಿ ರ್‍ಯಾಸ್ಕಲ್?’ ಎಂದು ಮಾನವಂತರು ಗೊಣಗಾಡಿದರೂ ರೌಂಡ್ಸ್‌ಅಪ್ ನೋಡುವುದನ್ನು ಬಿಡಲಿಲ್ಲ. ಕಿರಣನ ಮನೆಯವರೂ ತಿಳಿಹೇಳಿದರು. ಇಂತಹ ಕ್ರಿಮಿನಲ್ ಶೋಗಳಲ್ಲೇನು ಕ್ರಿಯೇಟಿವಿಟಿ ಇದೆ? ರಿಯಾಲಿಟಿ ಶೋ ನಡೆಸಿಕೊಡಯ್ಯ. ಹೊಸ ಪ್ರತಿಭೆಗಳಾದರೂ ಹೊರಬಂದಾರೆಂದು ಗೆಳೆಯರೂ ಶೇಪ್ ತೆಗೆದರು. ಜನರಿಗೆ ಅಮೇಧ್ಯವೇ ರುಚಿ. ನಾನೇನು ಮಾಡ್ಲಿ’ ಅಂದ.

ಸಿನೆಮಾ, ಟೀವಿ, ಮೊಬೈಲ್, ಪತ್ರಿಕೆಗಳೆಲ್ಲಾ ಮಾಧ್ಯಮಗಳಾಗಿ ಉಳಿದಿಲ್ಲ. ಈಗಿವು ಉದ್ಯಮಗಳಾಗಿಬಿಟ್ಟಿವೆಯೆಂದು ಕಥೆ ಹೊಡೆದ. ಇವನ ಮನೆಯವರೇ ಅವನು ಟೀವಿಯಲ್ಲಿ ಕಂಡೊಡನೆ ಚಾನಲ್ ಬದಲಾಯಿಸುವಂತಾದರು. ಚಾನಲ್ ಹೆಡ್ಡೇ ಅವನನ್ನು ಹೆಡ್ ಮೇಲೆ ಕೂರಿಸಿಕೊಂಡಿರುವಾಗ ಎಲ್ಲರಿಗೂ ಡೋಟ್‌ಕೇರ್ ಅಂದ ಕಿರಣ್. ದಲಿತನೊಬ್ಬನನ್ನು ಮರಕ್ಕೆ ಕಟ್ಟಿ ಥಳಿಸುವಾಗ ಎಗ್ಗಿಲ್ಲದೆ ಶೂಟ್ ಮಾಡಿದ. ಇಬ್ಬರು ಹೆಂಡಿರ ಮುದ್ದಿನ ಗಂಡನನ್ನು ಹೆಂಡಿರೇ ಬಡಿದು ಚಳಿ ಬಿಡಿಸುವುದನ್ನು ಡಿಫರೆಂಟ್ ಆಂಗಲ್‌ಗಳಲ್ಲಿ ಚಿತ್ರಿಸಿ ತೋರಿದಾಗಲಂತೂ ತಂಗಿಯೇ ಹೇಸಿಕೊಂಡಳು. ‘ಮೊದಲು ಜಗಳ ಬಿಡಿಸಬೇಕಿತ್ತು. ದಲಿತನಿಗೆ ನೀನು ರಕ್ಷಣೆ ಕೊಡಬೇಕಿತ್ತು ಕಣೋ. ಹೀಗೆಲ್ಲಾ ಚಿತ್ರಿಸೋದು ಅನಾಗರಿಕತೆ, ಅಮಾನವೀಯ ಎಂದೆಲ್ಲಾ ಛೀಮಾರಿ ಹಾಕಿದ್ದಳು. ಟೀವಿಗಳವರಿಗೂ ಸೆನ್ಸಾರ್ ನಿರ್ಬಂಧ ಇರಬೇಕೆನ್ನಿಸಿತ್ತು.

ಈಗಾಗಲೇ ಕಿರಣ್ ಬಗ್ಗೆ ಒಂತರಾ ಹೆದರಿಕೆ, ಪ್ಲಸ್ ಹೇವರಿಕೆ, ವಿಚಿತ್ರ ಅಭಿಮಾನ ಟೀವಿ ಪ್ರೇಕ್ಷಕರಲ್ಲಿ ಅಂಕುರವಾಗಿತ್ತು. ಅದನ್ನು ಕಾಯಂ ಆಗಿ ಹಿಡಿದಿಟ್ಟುಕೊಳ್ಳುವ ಗೀಳಿಗೆ ಬಿದ್ದ ಕಿರಣ್ ಎಂತಹದ್ದನ್ನೂ ಸ್ಟೋರಿ ಮಾಡಲು ಹೇಸದವನಾಗಿದ್ದ. ಒಂದು ಸಂಜೆ ಏಳರ ಸುಮಾರಿಗೆ ಊರಾಚೆ ಬರುತ್ತಿದ್ದ, ರಸ್ತೆ ಬದಿಗೆ ಕಾರ್ ಒಂದು ನಿಂತಿರುವುದನ್ನೂ ಹತ್ತಿರದಲ್ಲೇ ಹೆಣ್ಣಿನ ಚೀರಾಟವನ್ನು ಕೇಳಿ ಪುಳಕಿತನಾದ. ಕಾರು ನಿಲ್ಲಿಸಿದವನೇ ಪಕ್ಕದ ಸೀಟಲ್ಲಿರಿಸಿದ್ದ ಕ್ಯಾಮೆರಾ ಎತ್ತಿಕೊಂಡ, ಕಾರಿನ ಭಾವಭಂಗಿ ನಂಬರ್ ಪ್ಲೇಟ್‌ನ್ನ ವಿಡಿಯೊ ಮಾಡಿದ. ಚಂದಿರನ ಬೆಳಕಿನ ನಸುಗತ್ತಲಲ್ಲಿ ಕಳ್ಳಹೆಜ್ಜೆ ಇಕ್ಕಿ ಪೊದೆಗಳತ್ತ ಸಾಗಿದ. ಗ್ಯಾಂಗ್‌ರೇಪ್ ನಡೆದಿದೆ! ಹೆಣ್ಣಿನ ಚೀತ್ಕಾರ ಪ್ರತಿಭಟನೆ, ಹದ್ದಿನಂತೆ ಮುಗಿಬಿದ್ದಿರುವ ಗಂಡುಗಳು ಅವನಲ್ಲಿ ರೋಮಾಂಚನವನ್ನುಂಟು ಮಾಡಿದರು. ಮರೆಯಲ್ಲಿ ನಿಂತು ಕಂಡಷ್ಟನ್ನೇ ವೀಡಿಯೋಗೈದ. ಮರದ ಮೇಲೇರಿ ಟಾಪ್ ಆಂಗಲ್‌ನಲ್ಲೂ ಸೆರೆಹಿಡಿದ. ಸಿರಿವಂತರ ಮನೆ ಹೆಣ್ಣಾದರೊಂತರಾ ಮಜ. ಸಿರಿವಂತರ ಮನೆ ಹುಡುಗರಾದರೊಂತರಾ ಮಜ. ಇನ್ನು ಪೊಲೀಸರ ಬೇಜವಾಬ್ದಾರಿ ಬಗ್ಗೆ ಉಗಿಯೋದು ಇದ್ದದ್ದೇ. ನಮ್ಮಲ್ಲೇ ಮೊದಲಾಗಬೇಕೆಂಬ ಚಿಂತೆಗೆ ಬಿದ್ದ.

ರೇಪ್ ಮಾಡಿ ಮುಗಿಸಿದವರು ಚೀಪಿ ಎಸೆದ ಮಾವಿನ ಓಟೆಯಂತೆ ಹೆಣ್ಣನ್ನು ಬಿಸಾಡಿ ಪರಾರಿಯಾದರು. ಇದೀಗ ಹೆಣ್ಣನ್ನು ಆಸ್ಪತ್ರೆಗೆ ಕರೆದೊಯ್ಯಬೇಕೆಂಬ ಮನುಷ್ಯಪ್ರಜ್ಞೆ ಕಿರಣನಲ್ಲಿ ಜಾಗೃತಗೊಂಡಿತು. ಬಳಿಬಂದ. ರಕ್ತಸಿಕ್ತಗೊಂಡು ಅಸ್ತವ್ಯಸ್ತವಾಗಿ ಬಿದ್ದಿದ್ದ ಅವಳನ್ನು ಹತ್ತಿರದಿಂದಲೂ ವಿಡಿಯೊ ಮಾಡಿದ. ಕತ್ತಲಲ್ಲಿ ಮುಖವೂ ಅಸ್ಪಷ್ಟ. ಕೆನ್ನೆತಟ್ಟಿ ಮಾತನಾಡಿಸಿದ. ಪ್ರತಿಕ್ರಿಯೆ ಬರಲಿಲ್ಲ. ಎತ್ತಿ ತಂದು ಕಾರಿನ ಹಿಂಬದಿ ಸೀಟಲ್ಲಿ ಮಲಗಿಸಿದ. ಬೆಳಕಲ್ಲಿ ಕರುಣೆಯಿಂದ ನೋಡಿದ. ‘ಅಣ್ಣಾ’ ಎಂದಂತಾಯಿತು. ಬೆಚ್ಚಿಬಿದ್ದು ಹಿಂದಕ್ಕೆ ಸರಿದ.

## ಬೇರೇನು ಬೇಕು?

ನಿನ್ನ ಚಿಗುರು ಬೆರಳು
ತುಂಬು ತೋಳು
ತಿರುಗಿದ ಮೊಗದ ಮಗ್ಗುಲು
ಇಷ್ಟೇ ಕಂಡಿದ್ದು
ಸಾಕು!
ದಿನ ಸಂಪನ್ನವಾಗಲು
ಬೇರೇನು ಬೇಕು?

## ಒಂಟಿ ಹಕ್ಕಿ

ಬೆಳಬೆಳಗ್ಗೆ
ಒಂಟಿ ಹಕ್ಕಿಯ ಕೂಗು
ವಿರಹದಲ್ಲೇ?
ತನ್ನ ಕುಲದವರು
ಕಾಣೆಯಾಗುತ್ತಿರುವ
ಆತಂಕದಲ್ಲೇ?

## ಎಲ್ಲಿ ಹೋದೆ ಗೆಳೆಯ

ಸಂಜೆಗೆಂಪನು ಕಂಡು
ಗೂಡಿಗೆ ಮರಳಿದ
ಹಕ್ಕಿಗಳಿಗೋ ದುಗುಡ
ಎಲ್ಲಿ ಹೋದ ಗೆಳೆಯ
ನೀರಲ್ಲಿ
ಅವನದೆಂಥ ಗೂಡೋ..

— ಗೋವಿಂದ ಹೆಗಡೆ

